ಅಸಲು ದಾವೆ ಸಂಖ್ಯೆ - 184/2015
ಪಿಡಬ್ಲ್ಯು - 02
ದಿನಾಂಕ: 15.06.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ**

ವಾದಿಯರು ಹುಬ್ಬಳ್ಳಿಯಲ್ಲಿ ವಾಸಿಸುತ್ತಾರೆ. ನಾನು ಸವಣೂರಿನ ಕೋರಿಪೇಟೆ ಓಣಿಯಲ್ಲಿ ವಾಸಿಸುತ್ತೇನೆ. ದಾವಾ ಆಸ್ತಿ ಮೂಲತಃ ಸುವರ್ಣಮ್ಮ ಪಾಟೀಲ ಇವರದು ಇತ್ತು, ಅವರಕ್ಕಿಂತ ಮುಂಚೆ ಯಾರು ಮಾಲೀಕರು ಇದ್ದರು ಗೊತ್ತಿಲ್ಲ. ವಾದಿ ಸುವರ್ಣ ಪಾಟೀಲ 1994 ರಲ್ಲಿ ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ. ಸದರಿ ದಾವಾ ಆಸ್ತಿಯನ್ನು ವಾದಿ ಖರೀದಿಸಿರುತ್ತಾರೆ. ಯಾರ ಕಡೆಯಿಂದ ಖರೀದಿಸಿರುತ್ತಾರೆ ಗೊತ್ತಿಲ್ಲ. ಪ್ರತಿವಾದಿಯರ ಆಸ್ತಿ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಪಾಳಾಬದಾಮಿ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಕಂದಕ ಇರುತ್ತದೆ. ಪೂರ್ವಕ್ಕೆ ಪುರಸಭೆ ಸರಹದ್ದುಗಳು ಇರುತ್ತವೆ. ಪಶ್ಚಿಮಕ್ಕೆ ದೇವಸ್ಥಾನ ಇರುತ್ತದೆ. ಪ್ರತಿವಾದಿಯರ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ. ವಾದಿಯರ ಆಸ್ತಿಯ ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿ ಪುರಸಭೆ ಹದ್ದಿಯ ಆಸ್ತಿ ಎಂದರೆ ಸರಿ. ವಾದಿಯರು ಯಾವ ಆಸ್ತಿಯ ಕಬ್ಜೆಯಲ್ಲಿರುತ್ತಾರೆ, ಪ್ರತಿವಾದಿಯರು ಯಾವ ಆಸ್ತಿಯ ಕಬ್ಜೆಯಲ್ಲಿರುತ್ತಾರೆ ಮತ್ತು ಪುರಸಭೆ ಯಾವ ಆಸ್ತಿಯ ಕಬ್ಜೆಯಲ್ಲಿರುತ್ತಾರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಯಾರು ಮಾಹಿತಿ ಕೊಟ್ಟಿಲ್ಲ, ನಾನು ನೋಡಿದ್ದನ್ನು ಬರೆಸಿದ್ದೇನೆ. ದಾವಾ ಆಸ್ತಿ ನಂ.543 ಇರುತ್ತದೆ ಎಂದರೆ 563 ಇರುತ್ತದೆ. ವಾದಿ, ಪ್ರತಿವಾದಿಯರು ಮತ್ತು ಪುರಸಭೆ ನಡುವೆ ದಾವಾ ಆಸ್ತಿ ಕುರಿತು ಎಷ್ಟು ವರ್ಷದಿಂದ ತಂಟೆ ಮತ್ತು ವ್ಯಾಜ್ಯ ಇರುತ್ತದೆ ಎಂದರೆ 2015 ರಿಂದ ಇರುತ್ತದೆ. ಅದಕ್ಕಿಂತಲೂ ಮುಂಚೆ ಯಾವ ವ್ಯಾಜ್ಯಗಳು ಆಗಿರುತ್ತವೆ ನನಗೆ ಗೊತ್ತಿಲ್ಲ. ನನ್ನ ಆಸ್ತಿ ನಂಬರು ಹೇಳಲು ಬರುವುದಿಲ್ಲ. ಪ್ರತಿವಾದಿಯರು ವಾದಿಯರ ಆಸ್ತಿಯನ್ನು 2015 ರರಲ್ಲಿ ಅತೀಕ್ರಮಣ ಮಾಡಿರುತ್ತಾರೆ. ಎಷ್ಟು ಆಸ್ತಿ ಒತ್ತುವರಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ, ಆದರೆ ಅತೀಕ್ರಮಣ ಮಾಡಿರುತ್ತಾರೆ. ಪ್ರತಿವಾದಿಯರು ವಾದಿಯರ ದಾವಾ ಆಸ್ತಿಯಲ್ಲಿ 1994 ರಿಂದ ಕಬ್ಜೆಯಲ್ಲಿರುತ್ತಾರೆ, ಸಾಕ್ಷಿ ಮುಂದುವರೆದು ವಾದಿಯರು ದಾವಾ ಆಸ್ತಿಯಲ್ಲಿ 1994 ರಿಂದ ಕಬ್ಜೆಯಲ್ಲಿರುತ್ತಾರೆ ಇರುತ್ತಾರೆ ಅಂತಾ ಸ್ವತಃ ನುಡಿಯುತ್ತಾರೆ. ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮತ್ತು ಇತರ ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ಇರುತ್ತವೆ ಎಂದರೆ ಸರಿ. ಸದರಿ ದಾವೆಗಳ ಸಂಖ್ಯೆ ನನಗೆ ಗೊತ್ತಿಲ್ಲ. ವಾದಿ ಮತ್ತು

ಪ್ರತಿವಾದಿಯರ ನಡುವೆ ಯಾವ ದಿನ ಜಗಳ ಆಗಿರುತ್ತದೆ ನನಗೆ ಗೊತ್ತಿಲ್ಲ. ವಾದಿಯರು ಎಷ್ಟು ವರ್ಷದಿಂದ ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ, ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿರುವುದಿಲ್ಲ, ಖಾಯತರೀಖವಾಗಿ ಹುಬ್ಬಳ್ಳಿಯಲ್ಲಿ ವಾಸಿಸುತ್ತಾರೆ ಎಂದರೆ ಅವರು ಇಲ್ಲಿಯೂ ಇರುತ್ತಿದ್ದರು ಹುಬ್ಬಳ್ಳಿಯಲ್ಲಿಯೂ ಇರುತ್ತಿದ್ದರು. ವಾದಿಯರು ಸವಣೂರಿನಲ್ಲಿ ಯಾವ ಮನೆಯಲ್ಲಿರುತ್ತಿದ್ದರು ಸಂಖ್ಯೆ ಹೇಳಲು ಬರುವುದಿಲ್ಲ ಆದರೆ ಓಣಿ ಹೆಸರು ಹೇಳಲು ಬರುತ್ತದೆ. ವಾದಿಯರು ಕೋರಿಪೇಟೆ ಓಣಿಯಲ್ಲಿ ಇರುತ್ತಿದ್ದರು.ವಾದಿಯರು ಕೋರಿಪೇಟೆ ಓಣಿಯಲ್ಲಿ ವಾಸಮಾಡಿಲ್ಲ ಆದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.